ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

ದಿನಾಂಕ 22.02.2010 ರ ಶುದ್ಧ ನೋಂದಾಯಿತ ಕ್ರಯದ ಕರಾರು ಪತ್ರವನ್ನು ನಿಪಿ-1 ಎಂದು, ನಿಪಿ-1 ರ ಕ್ರಯದ ಕರಾರು ಪತ್ರಕ್ಕೆ ನಾನು ಮತ್ತು ಪ್ರತಿವಾದಿಯರು ಎಲ್ಲರೂ ಎಲ್ಲಾ ಪುಟಗಳಲ್ಲಿ ಸಹಿ ಮಾಡಿದ್ದು, ಕೊನೆಯ ಪುಟದಲ್ಲಿ ಇರುವ ವಾದಿಯ ಸಹಿಯನ್ನು ನಿಪಿ-1(ಎ), ಪ್ರತಿವಾದಿಯರ ಸಹಿಗಳನ್ನು ನಿಪಿ-1(ಬಿ) ರಿಂದ ನಿಪಿ-1(ಸಿ) ಎಂದು ಗುರುತಿಸಲಾಂತು. ಸದರಿ ಪತ್ರಕ್ಕೆ ಮಹೇಶ್ ಕುಮಾರ್ ಮತ್ತು ಮುಖೇಶ್ ನಾಯ್ಡುರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು ಅವರ ಸಹಿಗಳನ್ನು ನಿಪಿ-1(ಡಿ) ಮತ್ತು ನಿಡಿ-1(ಇ) ಎಂದು ಗುರುತಿಸಲಾಯಿತು. ಪತ್ರವನ್ನು ಕೆ ಪಿ ಶಿವಕುಮಾರ್ ರವರು ತಯಾರಿಸಿ ಮೊಹರು ಮತ್ತು ಸಹಿಯನ್ನು ಮಾಡಿರುತ್ತಾರೆ. ದಿನಾಂಕ 16.11.2005 ರ ಅಸಲು ದಾನ ಪತ್ರವನ್ನು ನಿಪಿ-2 ಎಂದು, ಪ್ರತಿವಾದಿಗೆ ಕಳುಹಿಸಿದ ನೋಟೀಸಿನ ಕಛೇರಿಯ ಪ್ರತಿಯನ್ನು ನಿಪಿ-3 ಎಂದು, ಅದಕ್ಕೆ ಸಂಬಂಧಪಟ್ಟ ಅಂಚೆ ರಶೀದಿಗಳನ್ನು ಒಟ್ಟಾರೆಯಾಗಿ ನಿಪಿ-4 ಎಂದು, ಅಂಚೆ ಸ್ವೀಕೃತಿಗಳನ್ನು ಒಟ್ಟಾರೆಯಾಗಿ ನಿಪಿ-5 ಎಂದು, ಜಾರಿಯಾಗದೆ ವಾಪಸ್ಸು ಬಂದಿರುವ ಅಂಚೆ ಲಕೋಟೆಯನ್ನು ನಿಪಿ-6 ಮತ್ತು 7 ಎಂದು ಗುರುತಿಸಿ ಅವುಗಳನ್ನು ಈಗ ತೆರೆದು ನೋಟಿಸಿನ ಪ್ರತಿಗಳನ್ನು ನಿಪಿ-6(ಎ) ಮತ್ತು ನಿಪಿ-7(ಎ) ಎಂದು ಗುರುತಿಸಲಾಯಿತು. ಪ್ರತಿವಾದಿಯರು ನೀಡಿರುವ ಜವಾಬು ನೋಟಿಸನ್ನು ನಿಪಿ-8 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎನ್ ಎಸ್ ಕುಲಕರ್ಣಿ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.